


ಪ್ರಾಣಿಗಳ ಹಕ್ಕಿಗಾಗಿ ಬರಿಮೈ ಹೋರಾಟಕ್ಕಿಳಿದಿರುವ ಪೇಟಾ ಮಿಶೆಲ್ ಒಬಾಮರ ಉಡುಪು ತೊಟ್ಟ ಚಿತ್ರ ಬಳಸಿಯೂ ಎಡವಟ್ಟು ಮಾಡಿಕೊಂಡಿದೆ. ಓಪ್ರಾ ವಿನ್‌ಫ್ರೆ, ತೈರಾ ಬ್ಯಾಂಕ್ಸ್ ನಡುವೆ ಚಿತ್ರ ತೂರಿಸುವಾಗ ತನ್ನ ಒಪ್ಪಿಗೆ ಕೇಳಿರಲಿಲ್ಲ ಎಂದು ಮಿಶೆಲ್ ಕೆರಳಿದ್ದಾರೆ. ಸಲೀಸಾಗಿ ಎಲ್ಲಾ ತೆರೆದಿಡಲು ತಾವಿರುವಾಗ ವೈಟ್‌ಹೌಸ್ ಬಾಗಿಲು ಕುಟ್ಟುವ ಅಧಿಕಪ್ರಸಂಗ ಯಾಕೆ ಬೇಕಿತ್ತು ಎಂದು ಸೆಲೆಬ್ರಿಟಿಗಳು ಕೇಳುತ್ತಿದ್ದಾರಂತೆ!

ದ.ಆಫ್ರಿಕಾದ ಅಧ್ಯಕ್ಷ ಝೂಮಾ ಝೂಂಝೂಂ ಎಂದು ನವವಧುವಿನೊಂದಿಗೆ ಕುಣಿಯುತ್ತಿರುವುದು ಐದನೇ ಬಾರಿ ಮದುವೆಯಾದ ಸಂತಸಕ್ಕೆ. 67 ವರ್ಷದ ಅಧ್ಯಕ್ಷರಿಗೆ 30ರ ಹರೆಯದ ಹೆಂಡತಿ ಜೊತೆ ಹೆಜ್ಜೆ ಹಾಕುವ ತಾಕತ್ತು ಸದ್ಯಕ್ಕಿದೆ. ಮುಂದೆ 6, 7.. ಎಂದು ಕೈ ಹಿಡಿಯಲು ಕ್ಯೂ ನಿಂತವರಿಗೆ ಝೂಮಾ ಕೂತೇ ತಾಳ ಹಾಕಬಹುದು.



ಇದು ಶಾಹಿದ್ ಕಪೂರ್‌ನ ಛಾನ್ಸ್. 'ಛಾನ್ಸ್ ಪೆ ಡಾನ್ಸ್' ಚಿತ್ರದ ಪ್ರಚಾರಕ್ಕೆ ನಟಿ ಜೆನೆಲಿಯ ಜೊತೆ ಕಾರಿನಲ್ಲಿ ರಾತ್ರಿ ಕಳೆದನಂತೆ. ತೋಪೆದ್ದು ಹೋಗುವ ಸಿನಿಮಾಗಳಿಗೆ ಇನ್ನೂ ಏನೇನು ಪ್ರಚಾರ ಬೇಕೋ!



ದ.ಕೊರಿಯಾದಲ್ಲಿ ಮನಸ್ಸಿಗೆ ಒಲ್ಲದ ಹೆಂಡತಿಗೆ ವಿಚ್ಛೇದನ ನೀಡಬಹುದು. ಆದರೆ ಹಾಸಿಗೆಗೆ ಬರಲೊಲ್ಲದ ಹೆಂಡತಿಯನ್ನು ಮನೆಯಿಂದಾಚೆ ಹಾಕುವ ಹಾಗಿಲ್ಲ. ಸಮಸ್ಯೆಯಿದ್ದರೆ ವೈದ್ಯರ ಬಳಿಗೆ ಹೋಗಿ, ವಕೀಲರ ಬಳಿಗಲ್ಲ ಎಂದು ಕೋರ್ಟ್ ಆದೇಶ ನೀಡಿದೆ. ಪಕ್ಕದ ಮನೆಯಾಕೆಗೋ, ಕಚೇರಿಯ ಹುಡುಗಿಗೋ ಮನಸ್ಸು ಕೊಟ್ಟ ಖದೀಮರಿಗೆ ಕಡಿವಾಣ ಹಾಕಲು ಕೋರ್ಟು ಈ ಕ್ರಮ ಕೈಗೊಂಡಿಲ್ಲ. ಘಟಸ್ಫೋಟ ಮಾಡಿಸುವ ಕೆಲಸದಿಂದ ಸುಸ್ತಾದ ನ್ಯಾಯಾಧೀಶರು ವೈಯಕ್ತಿಕ ಕೇಸುಗಳ ನಿರೀಕ್ಷೆಯಲ್ಲಿ ಈ ಆದೇಶ ನೀಡಿದ್ದಾರೆ.



ವಾಷಿಂಗ್ಟನ್ನಿನ ಈ ಜೋಡಿ ಮದುವೆಯಾಗಬೇಕಂತೆ. ಅದಕ್ಕೇ ತಂಪು ಪಾನೀಯದ 18,000ಖಾಲಿ ಕ್ಯಾನುಗಳನ್ನು ಸಂಗ್ರಹಿಸಿಟ್ಟುಕೊಂಡಿದ್ದಾರೆ. ಬಂದವರಿಗೆ ಖಾಲಿ ಡಬ್ಬಾ ಹಿಡಿಸಲಿಕ್ಕಾ? ಅಲ್ಲ, ಈ ಜೋಡಿ ಮದುವೆ ಖರ್ಚಿಗೆ ಈ ಕ್ಯಾನುಗಳನ್ನು ಮಾರಿ ಹಣ ಹೊಂದಿಸುತ್ತಾರಂತೆ. ಒಟ್ಟು 4 ಲಕ್ಷ ಖಾಲಿ ಕ್ಯಾನುಗಳು ಇವರ ಗುರಿ. ಅಲ್ಲಿಯವರೆಗೂ ಚಿಂದಿ ಆಯುವ ಕೆಲಸ.

ಸಿಸಿಲಿಯಾದ ವ್ಯಕ್ತಿಯೊಬ್ಬ ಹೊಸ ವರ್ಷವನ್ನು ಜೈಲಿನಲ್ಲಿ ಕಳೆದ. ಆತ ಮಾಡಿದ ಅಪರಾಧವಾದರೂ ಏನು? ಅಂಗಡಿಯಲ್ಲಿ ಸಿಹಿತಿಂಡಿ, ಚ್ಯೂಯಿಂಗ್ ಗಮ್ ಕದ್ದು ಪೊಲೀಸರು ಬರುವವರೆಗೆ ಕಾದ. ಹೊಸ ವರ್ಷದ ದಿನದಂದು ಹೆಂಡತಿ- ಮಕ್ಕಳ ಕಿರಿಕಿರಿಗಿಂತ ಜೈಲಿನ ಸೊಳ್ಳೆ, ತಿಗಣೆಗಳ ಸಹವಾಸವೇ ಮೇಲು ಎಂದು ಈ ಭೂಪ ಕಳವು ಮಾಡಿದನಂತೆ.

ಹೆಣ್ಣು ಕಪ್ಪೆಯನ್ನು ಗೆಲ್ಲಲು ಗಂಡು ಕಪ್ಪೆಗಳು ಜಿದ್ದಾಜಿದ್ದಿ ನಡೆಸುವುದು ಮಾಮೂಲು. ಆದರೆ ಜಾಣೆ ಹೆಣ್ಣು, ದೇಹವನ್ನು ಉಬ್ಬಿಸುತ್ತದೆ. ನರಪೇತಲ ಗಂಡುಗಳು ತರಗೆಲೆಗಳಂತೆ ಉರುಳಿದರೆ, ಪೈಲ್ವಾನ್ ಗಂಡು ಮಾತ್ರ ಸ್ವಯಂವರದಲ್ಲಿ ಪಾಸು. ಮಹಿಳೆಯರಿಗೂ ಈ ವರದಾನವಿದ್ದಿದ್ದರೆ ಅಖಾಡಾದಲ್ಲೇ ವರನ ಆಯ್ಕೆ ನಡೆಯುತ್ತಿತ್ತು.



Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@deccanherald.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65